ರಮ್.. ಪಮ್.. ರಮ್..

ರಮ್.. ಪಮ್.. ರಮ್.....

ಒಂದು ಜಾನಪದ ಕತೆ

ಕತೆಃ ಮ್ಯಾಗಿ ಡಫ್

ಚಿತ್ರಃ ಜೋಸ್ ಆರ್ಯುಗೋ, ಏರಿಯನ್ ಡ್ಯುಈ

ಕನ್ನಡಕ್ಕೆಃ ಪ್ರಭಾಕರ ನಾನಾವಟಿ

ಒಂದಾನೊಂದು ಕಾಲದಲ್ಲಿ ಕೋಗಿಲೆಯಂತೆ ಕಾಣುವ ಬ್ಲ್ಯಾಕ್ ಬರ್ಡ್ ಹಕ್ಕಿ ತನ್ನ ಪತ್ನಿಯ ಜತೆ ಒಂದು ಗಿಡದ ಮೇಲೆ ವಾಸಿಸುತ್ತಿತ್ತು. ಅದು ಇಂಪಾದ ದನಿಯಲ್ಲಿ ಹಾಡುತ್ತಿತ್ತು.

ಒಂದು ದಿನ ಅಲ್ಲಿಯ ಅರಸನು ಆ ಗಿಡದ ಹತ್ತಿರದಿಂದ ಹೋಗುತ್ತಿದ್ದಾಗ ಇಂಪಾದ ದನಿಯಲ್ಲಿ ಹಾಡುತ್ತಿರುವ ಆ ಹಕ್ಕಿಯನ್ನು ಕಂಡನು. ಅವನಿಗೆ ಆ ಹಕ್ಕಿಯ ಹಾಡು ಬಹಳಷ್ಟು ಹಿಡಿಸಿತು.

"ಆ ಇಂಪಾಗಿ ಹಾಡುವ ಹಕ್ಕಿಯನ್ನು ಹಿಡಿದು ನನ್ನ ಹತ್ತಿರ ತನ್ನಿ." ಎಂದು ತನ್ನ ಸೇವಕರಿಗೆ ಆಜ್ಞೆ ವಿಧಿಸಿದನು. "ನಾನು ಅದನ್ನು ನನ್ನ ಅರಮನೆಯಲ್ಲಿಯ ಪಂಜರದಲ್ಲಿ ಇಟ್ಟು ದಿನಾಲು ಹಾಡುಗಳನ್ನು ಕೇಳುವೆನು".

ಅರಸನ ಸೇವಕರು ಹಕ್ಕಿಯನ್ನು ಹಿಡಿಯಲು ಹೋದಾಗ ಅವರು ಒಂದು ತಪ್ಪು ಮಾಡಿದರು. ಅವರು ಘಕ್ಷಿಯ ಹೆಂಡತಿಯನ್ನು ಬಂಧಿಸಿ ಅರಮನೆಗೆ ಒಯ್ದರು. ಅವರಿಗೆ ಎರಡೂ ಹಕ್ಕಿಗಳು ಒಂದೇ ತೆರ ಕಂಡವು.

ಬ್ಲ್ಯಾಕಬರ್ಡ ತಿರುಗಿ ಗೂಡಿಗೆ ಬಂದಾಗ ಪತ್ನಿ ಇರಲಿಲ್ಲ. ಪತ್ನಿಯನ್ನು ಬಂಧಿಸಿಟ್ಟ ಅರಸನ ಮೇಲೆ ಸಿಟ್ಟು ಬಂತು. *ನಾನು ಅವಳನ್ನು ಬಿಡುಗಡೆ ಮಾಡುವೆ* ಎಂದು ಅದು ನಿಶ್ಚಯಿಸಿತು

ಒಂದು ಚೂಪಾದ ಉದ್ದ ಮುಳ್ಳಿನ ತುಂಡನ್ನು ಕತ್ತಿಯಂತೆ ಎದೆಗೆ ಅಂಟಿಸಿಕೊಂಡಿತು.

ಒಂದು ಸತ್ತಿದ್ದ ಕಪ್ಪೆಯ ಬೆನ್ನನ್ನು ಗುರಾಣಿಯಂತೆ ಹಿಡಿಯಿತು.

ಆಕ್ರೋಡಿನ ಅರ್ಧ ತುಂಡನ್ನು ಶಿರಸ್ತ್ರಾಣ-ದಂತೆ ತಲೆ ಮೇಲೆ ಇಟ್ಟುಕೊಂಡಿತು.

ಉಳಿದರ್ಧ ತುಂಡಿನ ಮೇಲೆ ತೊಗಲನ್ನು ಗಟ್ಟಿಯಾಗಿ ಕಟ್ಟಿ ನಗಾರೆ ಮಾಡಿತು. ಹಾಗು ಕಾಳಗಕ್ಕೆ ಸಜ್ಜಾಯಿತು.

ರಮ್.. ಪಮ್... ರಮ್.....

ದಾರಿಯಲ್ಲಿ ಅದಕ್ಕೆ ಬೆಕ್ಕು ಕಂಡಿತು.

“ಎಲ್ಲಿಗೆ ಹೋಗುತ್ತಿರುವಿ?” ಬೆಕ್ಕು ಕೇಳಿತು.

“ಅರಸನ ಜತೆ ಯುದ್ಧಕ್ಕೆ. ನನ್ನ ಹೆಂಡತಿಯನ್ನು ಬಿಡಿಸಿಕೊಂಡು ಬರಲು.”

“ನಾನು ಬರುವೆ. ನನ್ನೆಲ್ಲ ಮರಿಗಳನ್ನು ಆತ ಮುಳುಗಿಸಿದ್ದಾನೆ. “

“ಟಣ್ಣನೆ ಜಿಗಿದು ನನ್ನ ಕಿವಿಯೊಳಗೆ ಕುಳಿತುಕೋ.”

ಬೆಕ್ಕು ಜಿಗಿದು ಬಂದು ಕಿವಿಯ ಒಳಗೆ ಕುಳಿತುಕೊಂಡಿತು.



ರಮ್.. ಪಮ್.. ರಮ್.....

ಹಕ್ಕಿಯು ನಗಾರೆ ಬಾರಿಸುತ್ತ ಮುನ್ನಡೆಯುತ್ತಲಿತ್ತು.

ರಮ್..ಪಮ್.. ರಮ್.. ಪಮ್.. ರಮ್.. ಪಮ್....

ದಾರಿಯಲ್ಲಿ ಇರುವೆಗಳ ಸಾಲು.

“ಎಲ್ಲಿಗೆ ಹೋಗುತ್ತಿರುವಿ?” ಇರುವೆಗಳ ಸವಾಲು.

“ಅರಸನ ಜತೆ ಯುದ್ಧಕ್ಕೆ. ಆತ ನನ್ನ ಹೆಂಡತಿಯನ್ನು ಓಡಿಸಿಕೊಂಡು ಹೋಗಿದ್ದಾನೆ”.

ನಾವು ಕೂಡ ನಿನ್ನ ಜತೆ ಬರುವೆವು. ಆತ ನಮ್ಮ ಹುತ್ತಿನ ಮೇಲೆ ಕುದಿಯುವ ನೀರೆರಚಿದ್ದಾನೆ.

ಹಾಗಿದ್ದರೆ ನನ್ನ ಕಿವಿ ಹತ್ತಿರ ಬಂದು ಕುಳಿತುಕೊಳ್ಳಿ. ಪಕ್ಷಿ ಹೇಳಿತು.

ಇರುವೆಗಳೆಲ್ಲ ಬಂದು ಕುಳಿತವು.



ಬ್ಲ್ಯಕಬರ್ಡ ನಗಾರೆ ಬಾರಿಸುತ್ತ ಮುನ್ನಡೆಯುತ್ತಲಿತ್ತು.
ರಮ್..ಪಮ್..ರಮ್.. ಪಮ್.. ರಮ್.. ಪಮ್....

ಅಲ್ಲಿ ಅದಕ್ಕೆ ಒಂದು ಗಿಡದ ಟೊಂಗೆ ಭೆಟ್ಟಿಯಾಯಿತು. “ಎಲ್ಲಿಗೆ ಹೋಗುತ್ತಿರುವಿ?” ಟೊಂಗೆ ಕೇಳಿತು.

“ಅರಸನ ಜತೆ ಯುದ್ಧಕ್ಕೆ. ನನ್ನ ಹೆಂಡತಿಯನ್ನು ಬಿಡಿಸಿಕೊಂಡು ಬರಲು.”

“ನಾನು ನಿನ್ನ ಜತೆ ಬರುವೆ. ಆತ ಸಿಟ್ಟಿನಲ್ಲಿ ನನ್ನನ್ನು ಗಿಡದಿಂದ ಮುರಿದು ಎಸೆದಿದ್ದಾನೆ.” ‘`ಟೊಂಗೆ ಹೇಳಿತು.

“ಸರಿ. ನನ್ನ ಕಿವಿ ಹತ್ತಿರ ಕುಳಿತುಕೋ.” ಬ್ಲ್ಯಕಬರ್ಡ ಹೇಳಿತು.

ಟೊಂಗೆ ಜಿಗಿದು ಕುಳಿತಿತು.





ರಮ್..ಪಮ್..ರಮ್.. ಪಮ್.. ರಮ್.. ಪಮ್....

ಅರಮನೆ ಹತ್ತಿರ ಹಕ್ಕಿ ಬಂದಾಗ ನದಿಯನ್ನು ದಾಟಬೇಕಾಗಿತ್ತು.

“ಎಲ್ಲಿಗೆ ಹೋಗುತ್ತಿರುವಿ?” ನದಿಯು ಕೇಳಿತು.

“ಅರಸನ ಜತೆ ಯುದ್ಧಕ್ಕೆ. ಆತ ನನ್ನ ಹೆಂಡತಿಯನ್ನು ಓಡಿಸಿಕೊಂಡು ಹೋಗಿದ್ದಾನೆ”.

“ಹಾಗಿದ್ದರೆ ನಾನು ನಿನ್ನ ಜತೆ ಬರುವೆ. ನನ್ನ ನೀರನ್ನೆಲ್ಲ ಹೊಲಸು ಮಾಡಿದ್ದಾನೆ. “

“ನನ್ನ ಕಿವಿಯಲ್ಲಿಂದ ಹರಿಯಬೇಕಾಗುವದು. “

ಅದರ ಕಿವಿ ಮೊದಲೇ ತುಂಬಿ ಹೋಗಿತ್ತು .

ಆದರೂ ನದಿಯು ಒಳನುಗ್ಗಿ ಕಿವಿಯಲ್ಲಿ ಕುಳಿತುಕೊಂಡಿತು.

ಮತ್ತೊಮ್ಮೆ ನಗಾರೆಯ ಸಪ್ಪಳ. *ರಮ್..ಪಮ್..ರಮ್.. ಪಮ್.. ರಮ್.. ಪಮ್....*

ಹಕ್ಕಿ ಅರಮನೆ ಬಾಗಿಲಲ್ಲಿ ಬಂದು ಠಕ್ ಠಕ್ ಎಂದು ಬಾಗಿಲನ್ನು ಬಡೆಯಿತು.

“ಯಾರಿದ್ದಾರೆ?” ದ್ವಾರರಕ್ಷಕರ ಕೂಗು.

ನಾನು ಬ್ಲ್ಯಕಬರ್ಡ ಸೇನಾಪತಿ. ಅರಸನ ಜತೆ ಕಾಳಗ ಮಾಡಿ ನನ್ನ ಹೆಂಡತಿಯನ್ನು ತಿರುಗಿ ಒಯ್ಯಲು ಬಂದಿರುವೆ.”

ರಕ್ಷಕನು ಹೊರಗೆ ಇಣುಕಿ ಹಾಕಿ ನೋಡಿದನು. ಎದೆ ಮೇಲೆ ಚೂಪಾದ ಕತ್ತಿ, ಕಪ್ಪೆಯ ಬೆನ್ನಿನಿಂದ ಮಾಡಿದ ಗುರಾಣಿ, ಆಕ್ರೋಡದ ಸಿಪ್ಪೆಯ ಶಿರಸ್ತ್ರಾಣ, ನಗಾರೆ ಮುಂತಾದವುಗಳಿದ್ದ ಹಕ್ಕಿಯನ್ನು ಕಂಡಾಗ ಅವನಿಗೆ ನಗೆ ತಾಳಲಿಲ್ಲ.

ನಗುನಗುತ್ತಲೆ ಸ್ಟೂಲಮೇಲಿಂದ ಬಿದ್ದು ಬಿಟ್ಟನು. ಇಂತಹ ಮೋಜಿನ ದೃಶ್ಯವನ್ನೇ ಆತ ಎಂದಿಗೂ ಕಂಡಿರಲಿಲ್ಲ.

ಆದರೂ ಬಾಗಿಲನ್ನು ತೆರೆದು ಹಕ್ಕಿಯನ್ನು ಅರಸನ ಮುಂದೆ ತಂದು ನಿಲ್ಲಿಸಿದನು.



“ನಿನಗೆ ಏನು ಬೇಕು?” ಅರಸನು ಕೇಳಿದನು.

“ನನಗೆ ನನ್ನ ಹೆಂಡತಿ ಬೇಕು.” ಬ್ಲ್ಯಕಬರ್ಡ ಹೇಳಿತು.

“ಇಲ್ಲ. ನಿನಗೆ ನಿನ್ನ ಹೆಂಡತಿ ದೊರೆಯಲಾರಳು,” ಅರಸನು ಸಿಟ್ಟಿನಿಂದ ಹೇಳಿದನು. “ಹಾಗಿದ್ದರೆ ಇದರ ಪರಿಣಾಮಗಳನ್ನು ನಿನಗೆ ಭೋಗಿಸಬೇಕಾಗುವದು,” ಹಕ್ಕಿ ಹೇಳಿತು.

ಇಷ್ಟು ಹೇಳಿ ಹಕ್ಕಿಯು ನಗಾರೆ ಬಾರಿಸುತ್ತ ಅರಮನೆ ತುಂಬ ಓಡಾಡತೊಡಗಿತು.

ರಮ್..ಪಮ್..ರಮ್.. ಪಮ್.. ರಮ್.. ಪಮ್....

“ ಈ ಮೂರ್ಖ ಹಕ್ಕಿಯನ್ನು ಕೂಡಲೇ ಬಂಧಿಸಿ ಕೋಳಿಗಳ ಮುಂದೆ ಎಸೆಯಿರಿ,” ಅರಸ ಚೀರಿದನು. “ಕೋಳಿಗಳೆಲ್ಲ ಈ ಹಕ್ಕಿಯನ್ನು ಕೊನೆಗಾಣಿಸುವವು...”

ಅರಸನ ಸೇವಕರು ಹಕ್ಕಿಯನ್ನು ಹಿಡಿದು ಕೋಳಿ ಗೂಡಿನಲ್ಲಿ ನುಗಿಸಿದರು.

ಸೇವಕರು ಹಕ್ಕಿಯನ್ನು ಗೂಡಿನಲ್ಲಿ ಎಸೆದಾಗ ಕತ್ತಲೆಯಾಗಿತ್ತು. ಕೋಳಿಗಳೆಲ್ಲ ನಿದ್ದೆಗಣ್ಣಿನಲ್ಲಿದ್ದವು. ಅರಮನೆಯಲ್ಲಿ ಪೂರ್ಣ ಮೌನವಾದಾಗ ಹಕ್ಕಿಯು ತನ್ನ ಇಂಪಾದ ದನಿಯಲ್ಲಿ ಹಾಡತೊಡಗಿತುಃ

"ನನ್ನ ಕಿವಿಯಿಂದ ಹೊರಬೀಳು, ಬೆಕ್ಕೆ.

ಇಲ್ಲಿ ಸಾಕಷ್ಟು ಕೋಳಿಗಳಿವೆ ಮತ್ತು ಎಲ್ಲ ನಿದ್ದೆಗಣ್ಣಿನಲ್ಲಿವೆ.

ಕಿವಿಯಿಂದ ಹೊರಬಿದ್ದು ಅವುಗಳ ಹಿಂದೆ ಓಡು.

ಅವುಗಳನ್ನು ಸಾಕಷ್ಟು ದಣಿಸು. "

ಬೆಕ್ಕು ಕಿವಿಯಿಂದ ಮೆಲ್ಲನೆ ಹೊರಬಿದ್ದು ಕೋಳಿಗಳ ಮೇಲೆ ದಾಳಿ ಮಾಡಿತು. ಕೋಳಿಗಳೆಲ್ಲ ಅಂಜಿ ಓಡಾಡತೊಡಗಿದವು. ಎಲ್ಲ ಕೋಳಿಗಳು ಬಾಗಿಲಿನಿಂದ ಹೊರಬಿದ್ದು ಜೀವ ಉಳಿಸಿಕೊಂಡವು.

ಬೆಕ್ಕು ಹಕ್ಕಿಯ ಕಿವಿಯನ್ನು ಸೇರಿ ಗಡದ್ದಾಗಿ ನಿದ್ದೆ ಮಾಡತೊಡಗಿತು. . .

ಮರುದಿನ ಬೆಳಿಗ್ಗೆ ಹಕ್ಕಿಯ ಸುದ್ದಿ ತಿಳಿಯಲು ಸೇವಕರನ್ನು ಕಳುಹಿದನು. ಕೋಳಿಗಳೆಲ್ಲ ಓಡಿ ಹೋದ ಸುದ್ದಿ ತಿಳಿಯಿತು. ಮತ್ತು ಹಕ್ಕಿ *ರಮ್..ಪಮ್..ರಮ್.. ಪಮ್.. ರಮ್.. ಪಮ್....*ಎಂದು ನಗಾರೆ ಬಾರಿಸುತ್ತ ಕೋಳಿ ಗೂಡಿನಲ್ಲಿ ಸುತ್ತಾಡುತ್ತಲಿತ್ತು.. ಅರಸನಿಗೆ ತುಂಬಾ ಸಿಟ್ಟು ಬಂತು.

"ಇಂದು ರಾತ್ರಿ ಈ ಕೇಡಿ ಹಕ್ಕಿಯನ್ನು ಕುದುರೆಗಳನ್ನು ಕಟ್ಟಿದ ಕಾಡಿನಲ್ಲಿ ಎಸೆಯಿರಿ. ಕುದುರೆಗಳ ಕಾಲಲ್ಲಿ ಸಿಕ್ಕು ಸಾಯಲಿ." ಎಂದು ಅರಸ ಗುಡುಗಿದನು.

ಆ ದಿನ ಸೇವಕರು ಹಕ್ಕಿಯನ್ನು ಬಂಧಿಸಿ ಅಡವಿಯಲ್ಲಿರುವ ಕಾಡು ಕುದುರೆಗಳಿರುವ ಅಶ್ವಶಾಲೆಯಲ್ಲಿ ಎಸೆದು ಮರುಳಿ ಅರಮನೆಗೆ ಹೋದರು. ಹಕ್ಕಿ ನೋಡನೋಡುವಷ್ಟರಲ್ಲಿ ಅಲ್ಲಿಯ ಎತ್ತರದಲ್ಲಿರುವ ಮಹಡಿಯ ಮೇಲೆ ಹೋಗಿ ಕುಳಿತುಕೊಂಡಿತು. ಎಲ್ಲೆಡೆ ಮೌನ ಕವಿದಾಗ ಅಶ್ವಶಾಲೆಯಲ್ಲಿಯ ಎಲ್ಲರೂ ಮಲಗಿಕೊಂಡರು.

ಆಗ ಹಕ್ಕಿಯು ಮೆಲ್ಲಗೆ ಹಾಡತೊಡಗಿತು.

"*ನನ್ನ ಕಿವಿಯಿಂದ ಹೊರಬೀಳು, ಟೊಂಗೆ.*

ನನಗೆ ಸಹಾಯ ಮಾಡು.

ತಡಮಾಡದೆ ಈ ಕುದುರೆಗಳನ್ನು ಚೆನ್ನಾಗಿ ಥಳಿಸು.

ಈ ಕುದುರೆಗಳೆಲ್ಲ ಪೆಟ್ಟು ತಪ್ಪಿಸಲು

ಬಾಗಿಲಿನ ಹೊರಗೆ ಓಡಿ ಹೋಗಲಿ. "

ಟೊಂಗೆ ಕಿವಿಯಿಂದ ಹೊರಬಿದ್ದು ಹಕ್ಕಿ ಹೇಳಿದಂತೆ ಕುದುರೆಗಳಿಗೆ ಪೆಟ್ಟು ಕೊಟ್ಟು ಅವುಗಳನ್ನು ಹೊರ ಓಡಿಸಿ ಮತ್ತೇ ಹಕ್ಕಿಯ ಕಿವಿಯಲ್ಲಿ ಬಂದು ಕುಳಿತುಕೊಂಡಿತು

ಮರುದಿನ ಮುಂಜಾನೆ ಹಕ್ಕಿಯ ಮೃತ ಶರೀರ ತರಲೆಂದು ಅರಸನು ಸೇವಕರನ್ನು ಕಳಿಸಿಕೊಟ್ಟನು. ಸೇವಕರು ಅಲ್ಲಿ ತಲುಪಿದಾಗ ಕುದುರೆಗಳೆಲ್ಲ ಓಡಿ ಹೋಗಿದ್ದವು ಮತ್ತು ಹಕ್ಕಿ *ರಮ್..ಪಮ್..ರಮ್.. ಪಮ್.. ರಮ್.. ಪಮ್....*ಎಂದು ನಗಾರೆ ಬಾರಿಸುತ್ತ ಸುತ್ತು ಹಾಕುತ್ತಿತ್ತು.

ಅರಸನು ಸಿಟ್ಟಿಗೆದ್ದು ಕಿಡಿಕಿಡಿಯಾದನು. ಕುದುರೆಗಳ ಮೇಲೆ ಆತನು ಸಾಕಷ್ಟು ವೆಚ್ಚ ಮಾಡಿದ್ದನು.

“ ಇಂದು ರಾತ್ರಿ ಈ ಹಕ್ಕಿಯನ್ನು ಗಜಶಾಲೆಯ ಆನೆಗಳ ಕಾಲ್ಕೆಳಗೆ ತುಳಿಯಲು ಬೀಸಾಕಿ ಬನ್ನಿ. ಅಲ್ಲಿಯೇ ಅದು ಸಾಯಲಿ.” ಎಂದು ಸಿಟ್ಟನಲ್ಲಿ ಆಜ್ಞೆ ಕೊಟ್ಟನು. ಸೇವಕರು ಹಕ್ಕಿಯನ್ನು ಗಜಶಾಲೆಯಲ್ಲಿ ಬಿಟ್ಟ ಕ್ಷಣವೇ ಅದು ಒಂದು ಸುರಕ್ಷಿತವಾದ ತಾಣದಲ್ಲಿ ಆನೆಗಳಿಗೆ ಕಾಣದಂತೆ ಕುಳಿತು ಬಿಟ್ಟಿತು. ಆನೆಗಳೆಲ್ಲ ತೂಕಡಿಸುತ್ತಿದ್ದಾಗ ಹಕ್ಕಿ ತನ್ನ ಇಂಪಾದ ದನಿಯಲ್ಲಿ ಹಾಡತೊಡಗಿತುಃ

“*ನನ್ನ ಕಿವಿಯಿಂದ ಹೊರ ಬನ್ನಿ, ಇರುವೆಗಳೆ, ನನಗೆ ಸಹಾಯ ಮಾಡಿ.*

ಆನೆಗಳ ಸೊಂಡೆಯ ಮೇಲೆ ಏರಿ ಆನೆಯ ತಲೆಯನ್ನು ಕುಕ್ಕಿರಿ.

ರಭಸದಿಂದ ಕುಕ್ಕಿದಾಗ ಆನೆಗಳಿಗೆ ಮತ್ತೇರಿ

ಅವು ತಮ್ಮ ತಮ್ಮಲ್ಲಿಯೇ ಕಾದಾಡುವವು .”

ಎಲ್ಲ ಇರುವೆಗಳು ಆನೆಗಳನ್ನು ಮುತ್ತಿದವು. ಆನೆಗಳ ತಲೆಯನ್ನು ಕಡಿಯತೊಡಗಿದವು. ಆನೆಗಳೆಲ್ಲ ರೊಚ್ಚಿಗೆದ್ದು ತಮ್ಮ ತಮ್ಮೊಳಗೆ ಕಾದಾಡಿ ಸತ್ತು ಹೋದವು.

ಇರುವೆಗಳೆಲ್ಲ ತಮ್ಮ ಕೆಲಸ ಮುಗಿಸಿ ಮತ್ತೇ ಹಕ್ಕಿಯ ಕಿವಿಯಲ್ಲಿ ಬಂದು ಕುಳಿತವು.

ಮರುದಿನ ಬೆಳಿಗ್ಗೆ ಹಕ್ಕಿಯು ಸತ್ತದ್ದನ್ನು ಸ್ವಂತ ಕಣ್ಣಿನಿಂದ ನೋಡಲೆಂದು ಅರಸನು ಗಜಸಾಲೆಗೆ ಬಂದನು. ಆನೆಗಳೆಲ್ಲ ಸತ್ತಿದ್ದನ್ನು ಮತ್ತು ಹಕ್ಕಿಯು *ರಮ್..ಪಮ್..ರಮ್.. ಪಮ್.. ರಮ್.. ಪಮ್....*ಎಂದು ನಗಾರಿ ಬಾರಿಸುತ್ತಿ ದ್ದದ್ದನ್ನು ನೋಡಿದಾಗ ಅರಸನ ಸಿಟ್ಟು ನೆತ್ತಿಗೇರಿತು. ಇದೆಲ್ಲ ಹೇಗೆ ಆಗುತ್ತಿದೆ ಎಂಬುದೇ ನನಗೆ ತಿಳಿಯದ ಒಗಟೆ ಎಂದು ಅರಸನು ವಿಚಾರ ಮಾಡತೊಡಗಿದನು. ನಾನೇ ಈ ಹಕ್ಕಿಯನ್ನು ನನ್ನ ಮಂಚಕ್ಕೆ ಕಟ್ಟಿ ಮುಂದೆ ಏನಾಗುತ್ತದೆಯೊ ಅದನ್ನು ನೋಡುತ್ತೇನೆ ಎಂದು ನಿಶ್ಚಯಿಸಿ ಹಕ್ಕಿಯನ್ನು ಮಂಚಕ್ಕೆ ಕಟ್ಟಿ ಎಂದು ಅಪ್ಪಣೆ ಕೊಟ್ಟನು.

ಅರಮನೆಯಲ್ಲಿ ಎಲ್ಲರು ಮಲಗಿದ ಮೇಲೆ ಮೌನ ಕವಿಯಿತು. ಅರಸ ಮಾತ್ರ ನಿದ್ದೆ ಮಾಡುತ್ತಿದ್ದಂತೆ ನಾಟಕ ಮಾಡುತ್ತಿದ್ದನು.

ಹಕ್ಕಿಯು ತನ್ನ ಇಂಪಾದ ದನಿಯಲ್ಲಿ ಹಾಡತೊಡಗಿತು.

"*ನದಿಯೇ, ಕಿವಿಯಿಂದ ಹೊರಗೆ ಬೀಳು.*
ಮಲಗುವ ಕೋಣೆಗೆ ಸುತ್ತು ಹಾಕು.
ಕೋಣೆಯನ್ನು ನೀರಿನಲ್ಲಿ ಮುಳುಗಿಸಿ ಬಿಡು.
ಅರಸನ ತಲೆವರೆಗೆ ನೀರು ಬರಲಿ."



ನದಿ ಕಿವಿಯಿಂದ ಹೊರಬಿದ್ದು ಕೋಣೆತುಂಬ ಹರಿಯತೊಡಗಿತು. ಅರಸನ ಹಾಸಿಗೆ, ಮಂಚಗಳು ತೇಲತೊಡಗಿದವು. ಅರಸನು ಗಾಬರಿಯಾದನು. ಅವನು ಹಕ್ಕಿಯೇ, ನಿನ್ನ ಹೆಂಡತಿಯನ್ನು ತೆಗೆದುಕೊಂಡು ದೂರ ಹೊರಟು ಹೋಗು. ಎಂದು ಚೀರಿ ಹೇಳಿದನು

ಬ್ಲ್ಯಕಬರ್ಡ ತನ್ನ ಹೆಂಡತಿಯನ್ನು ಕರೆದುಕೊಂಡು ತನ್ನ ಗೂಡಿಗೆ ತಿರುಗಿ ಬಂದಿತು.



ಉಳಿದ ಎಲ್ಲವೂ ಆ ಗಿಡದ ಸಮೀಪವೆ ಬಂದು ಇರತೊಡಗಿದವು.